ಗಣಕ ಶಾಖೆ

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 559

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಎಸ್.ಎಲ್. ಧರ್ಮೇಗೌಡ

ಉತ್ತರಿಸಬೇಕಾದ ದಿನಾಂಕ : 13.12.2018

ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ ; | ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಮೀಸಲಿರಿಸಿದ ಅನುದಾನ ಎಷ್ಟು; (ಪೂರ್ಣ ವಿವರಗಳನ್ನು ನೀಡುವುದು) | ಅನುಬಂಧ-2ರಲ್ಲಿ ನೀಡಲಾಗಿದೆ. |
| ಇ) | ಚಿಕ್ಕಮಗಳೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಸರ್ಕಾರವು ಬಿಡುಗಡೆ ಮಾಡಿದ ಅನುದಾನ ಎಷ್ಟು; (ಪೂರ್ಣ ವಿವರಗಳನ್ನು ಯೋಜನೆವಾರು ಹಾಗೂ ವರ್ಷವಾರು ಮಾಹಿತಿ ನೀಡುವುದು) | ಅನುಬಂಧ-3ರಲ್ಲಿ ನೀಡಲಾಗಿದೆ. |

ಸಂಖ್ಯೆ:ಮಮಇ:137:ಸ್ವೀಮರ:2018

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ಎಲ್ ಧರ್ಮೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:559ಕ್ಕೆ ಅನುಬಂಧ-1.**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

**ಮಹಿಳೆಯರ ಹಾಗೂ ಮಕ್ಕಳ ಕಲ್ಯಾಣಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ**

- ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ತರಬೇತಿ
- ಉದ್ಯೋಗಿತ ಮಾತೆಯರ ಮಕ್ಕಳಿಗಾಗಿ ಶಿಶುವಿಹಾರಗಳು
- ಅಂಗನವಾಡಿಗಳ ನಿರ್ವಹಣೆ
- ಬೇಟಿ ಬಚಾವೋ ಬೇಟಿ ಪಡಾವೋ
- ಒನ್ ಸ್ಟಾಪ್ ಕೇಂದ್ರ
- ಪ್ರಾಯ ಪೂರ್ವ ಬಾಲಕಿಯರ ಯೋಜನೆ (ಸಬಲ)
- ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ
- ಸ್ವಾಧಾರ ಗೃಹ
- ಉಜ್ವಲ ಯೋಜನೆ
- ಸಮಗ್ರ ಶಿಶು ಅಭಿವೃದ್ಧಿ ಯೋಜನೆ (30 ಜಿಲ್ಲಾ ಘಟಕ) ಆಡಳಿತ ವೆಚ್ಚ
- ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಕೇಂದ್ರ ಪುರಸ್ಕೃತ) (204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ)
- ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ (ಮಾತೃಪೂರ್ಣ, ಸೃಷ್ಟಿ ಮತ್ತು ಕ್ಷೀರಭಾಗ್ಯ ಯೋಜನೆ)
- ಮಹಿಳೆಯರ ಮತ್ತು ಮಕ್ಕಳ ಅನ್ಯೆತಿಕ ಸಾಗಾಟದ ನಿವಾರಣೆಯ ಯೋಜನೆ
- ಭಾಗ್ಯಲಕ್ಷ್ಮಿ
- ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ
- ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆ
- ಸ್ತ್ರೀಶಕ್ತಿ ಯೋಜನೆ
- ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ ಬಗ್ಗೆ
- ಗೆಳತಿ–ವಿಶೇಷ ಚಿಕಿತ್ಸಾ ಘಟಕ
- ಸ್ಥೈರ್ಯ ನಿಧಿ
- ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ನಿರ್ಮಾಣ
- ಬಾಲಕಿಯರಿಗಾಗಿ ವಸತಿ ನಿಲಯ
- ಸಾಂತ್ವನ -ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು
- ನಬಾರ್ಡ್ ನೆರವಿನಿಂದ ಅಂಗನವಾಡಿ ಕಟ್ಟಡ ನಿರ್ಮಾಣ
- ಅಂಗನವಾಡಿ ಕಟ್ಟಡ ನಿರ್ಮಾಣ (ವಿಶೇಷ ಅಭಿವೃದ್ದಿ ಯೋಜನೆ)
- ಅಂಗನವಾಡಿ ಕಟ್ಟಡಗಳ ನಿರ್ಮಾಣ (ಐ.ಸಿ.ಡಿ.ಎಸ್ – ನರೇಗ)
- ಅಂಗನವಾಡಿ ಕಟ್ಟಡಗಳ ಉನ್ನತೀಕರಣ
- ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕ್ಷೇಮಾಭಿವೃದ್ದಿ ನಿಧಿ
- ಅಂಗನವಾಡಿ ಕಾರ್ಯಕರ್ತೆಯರ ಹೊಸ ಪಿಂಚಣಿ ಪದ್ದತಿ
- ತಾಲ್ಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಉತ್ಪನ್ನಗಳಿಗೆ ಮಾರುಕಟ್ಟೆ ಮಳಿಗೆಗಳ ನಿರ್ಮಾಣ
- ಸ್ವಸಹಾಯ ಸಂಘಗಳು ಮತ್ತು ಗೊಂಚಲು ತರಬೇತಿ ಕೇಂದ್ರಗಳ ನಿರ್ಮಾಣ
- ನಿರ್ಗತಿಕ ಮಕ್ಕಳ ಕುಟೀರಗಳು

- ಅಂಗನವಾಡಿ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ
- ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ
- ಸುಧಾರಣಾ ಸಂಸ್ಥೆಗಳ ಕಟ್ಟಡ ನಿರ್ಮಾಣ
- ರಾಜ್ಯ ಮಹಿಳಾ ನಿಲಯಗಳು ಹಾಗೂ ಸ್ವೀಕಾರ ಕೇಂದ್ರಗಳು
- ಮಾತೃಶ್ರೀ ಯೋಜನೆ
- ಸುಧಾರಣಾ ಸಂಸ್ಥೆಗಳ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ

## ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಮಹಿಳೆಯರು, ಮಕ್ಕಳು ಹಾಗೂ ಎಲ್ಲಾ ವಿಕಲಚೇತನರ ಕಲ್ಯಾಣಕ್ಕಾಗಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನ ಗೊಳಿಸುತ್ತಿರುವ ಯೋಜನೆಗಳು ಈ ಕೆಳಕಂಡಂತಿದೆ. ಅಲ್ಲದೇ ಹೊಸದಾಗಿ ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ ಯೋಜನೆ ಹಾಗೂ ಹಿರಿಯ ನಾಗರಿಕರಿಗೆ ಆನ್-ಲೈನ್‌ನಲ್ಲಿ ಗುರುತಿನ ಚೀಟಿ ವಿತರಣೆ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಮಿಕ್ಕಂತೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿರುವ ಯೋಜನೆಗಳಿಗೆ ನಿಯಮಾನುಸಾರ ಮಾರ್ಗಸೂಚಿಗಳನ್ನು ಮಾಡಲಾಗುತ್ತಿದೆ.

### ಮಹಿಳೆಯರು ಹಾಗೂ ಮಕ್ಕಳಿಗಾಗಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

- **ಮಂದಮತಿ ಮಹಿಳೆಯರ ಅನುಪಾಲನಾ ಗೃಹ** : 18 ವರ್ಷ ಮೇಲ್ಪಟ್ಟ ನಿರ್ಗತಿಕ ಬುದ್ಧಿಮಾಂದ್ಯ ಮಹಿಳೆಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ. ಕ್ರಮವಾಗಿ ಬೆಂಗಳೂರಿನಲ್ಲಿ 100 ಹಾಗೂ ಹುಬ್ಬಳ್ಳಿಯಲ್ಲಿ 50 ಬುದ್ಧಿಮಾಂದ್ಯ ಮಹಿಳೆಯರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ.
- **ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಹಾಗೂ ತರಬೇತಿದಾರರ ವಸತಿ ನಿಲಯ** : ಇಲಾಖಾ ವತಿಯಿಂದ ಉದ್ಯೋಗಸ್ಥ ಅಂಗವಿಕಲ ಮಹಿಳೆಯರ ಹಾಗೂ ತರಬೇತಿದಾರರಿಗೆ ವಸತಿ ನಿಲಯವನ್ನು ಬೆಂಗಳೂರಿನಲ್ಲಿ ನಡೆಸುತ್ತಿದ್ದು, ಇಲ್ಲಿ 50 ಉದ್ಯೋಗಸ್ಥ ಮತ್ತು ತರಬೇತಿ ಪಡೆಯುತ್ತಿರುವ ಮಹಿಳೆಯರಿಗೆ ವಸತಿ ಸೌಲಭ್ಯ ಕಲ್ಪಿಸಲು ಅವಕಾಶವಿರುತ್ತದೆ. ಉದ್ಯೋಗಸ್ಥ ಮಹಿಳೆಯರು ತಮ್ಮ ವೇತನದ ಶೇ.5ರಷ್ಟನ್ನು ಬಾಡಿಗೆಗೆ ಪಾವತಿಸಬೇಕಾಗುತ್ತದೆ. ಊಟಕ್ಕೆ ತಗಲುವ ತಿಂಗಳ ಒಟ್ಟು ವೆಚ್ಚವನ್ನು ಎಲ್ಲಾ ನಿವಾಸಿಗಳು ಹಂಚಿಕೆ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ.
- **ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು** : ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿವಿಧ ಜಿಲ್ಲೆಗಳಲ್ಲಿ 26 ಮಹಿಳಾ ವಸತಿ ನಿಲಯಗಳನ್ನು ನಡೆಸುತ್ತಿದ್ದು, ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ. ಪ್ರತಿ ವಸತಿ ನಿಲಯದಲ್ಲಿ 50 ಫಲಾನುಭವಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.
- **ಶಿಶುಪಾಲನಾ ಭತ್ಯೆ ಯೋಜನೆ** : ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 2 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

## ವಿಕಲಚೇತನ ಮಕ್ಕಳಿಗೆ ಅನುಷ್ಠಾನಗೊಳಿಸುತ್ತಿರುವ ಇಲಾಖಾ ಯೋಜನೆಗಳು

- **ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ :** ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ. ಪ್ರಸ್ತುತ ನೀಡಲಾಗುತ್ತಿರುವ ತರಗತಿವಾರು ವಿದ್ಯಾರ್ಥಿ ವೇತನದ ವಿವರ ಈ ಕೆಳಕಂಡಂತಿದೆ.

| ಕ್ರಸಂ | ವಿಕಲಚೇತನ ವಿದ್ಯಾರ್ಥಿಗಳಿಗೆ | ವಿದ್ಯಾರ್ಥಿ ವೇತನ (ಮಾಹೆಯಾನ) |
|---|---|---|
| 1 | 1 ರಿಂದ 5ನೇ ತರಗತಿ | 100/- |
| 2 | 6ರಿಂದ 10ನೇ ತರಗತಿ | 200/- |
| 3 | ಪಿ.ಯು.ಸಿ | 300/- |
| 4 | ಬಿ.ಎ/ಬಿ.ಎಸ್ಸಿ/ಬಿ.ಕಾಂ, ಇತರೆ ಪದವೀಧರರು ಹಾಗೂ ಟಿ.ಸಿ.ಹೆಚ್/ತತ್ಸಮಾನ | 400/- |
| 5 | ಬಿ.ಇ./ಬಿ.ಟೆಕ್./ಎಂ.ಬಿ.ಬಿ.ಎಸ್, ಎಲ್.ಎಲ್.ಬಿ/ ಡಿಪ್ಲೋಮಾ ಇನ್ ಪ್ರೋಫೆಷನ್ ಮತ್ತು ಇಂಜನಿಯರಿಂಗ್ ಇನ್ ಪ್ಲಾಂಟ್ ಟ್ರೈನಿಂಗ್. | 500/- |
| 6 | ಎಂ.ಎ, ಎಂ.ಎಸ್ಸಿ, ಎಂ.ಕಾಂ. ಎಲ್.ಎಲ್.ಎಂ ಹಾಗೂ ತತ್ಸಮಾನ | 600/- |

- **ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ :** ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.

| ಕ್ರಸಂ | ತರಗತಿಗಳು | ನೀಡುತ್ತಿರುವ ಪ್ರೋತ್ಸಾಹ ಧನ |
|---|---|---|
| 1 | ಎಸ್.ಎಸ್.ಎಲ್.ಸಿ | 3000/- |
| 2 | ಪದವಿ ಪೂರ್ವ ಶಿಕ್ಷಣ | 5000/- |
| 3 | ಪದವಿ / ಟಿ.ಸಿ.ಹೆಚ್. | 8000/- |
| 4 | ಬಿ.ಇಡಿ / ಸ್ನಾತಕೋತ್ತರ ಪದವಿ / ಎಂ.ಎ., ಎಂ.ಕಾಂ./ಎಂ.ಎಸ್ಸಿ ಹಾಗೂ ಪದವಿ ನಂತರ 2 ವರ್ಷಗಳ ಕೋರ್ಸ್‌ಗೆ. | 10000/- |
| 5 | ಕೃಷಿ ಪದವಿ / ಇಂಜನೀಯರಿಂಗ್ / ಪಶು ವೈದ್ಯಕೀಯ / ಎಂ.ಇಡಿ. ವೈದ್ಯಕೀಯ ಪದವಿ. | 12000/- |

- **ಸರ್ಕಾರಿ ವಸತಿಯುತ ಶಾಲೆಗಳು :** ಇಲಾಖೆಯಡಿ 4 ಅಂಧ ಮಕ್ಕಳ ವಸತಿ ಶಾಲೆಗಳು ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ಮತ್ತು 05 ಶ್ರವಣದೋಷವುಳ್ಳ ವಸತಿ ಶಾಲೆಗಳನ್ನು ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿ ನಡೆಸಲಾಗುತ್ತಿದೆ ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮತ್ತು ಶ್ರವಣದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. **ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ ಹಾಗೂ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.**

- **ಅನುದಾನ ಸಂಹಿತ 1982ರಡಿ ನಡೆಸಲಾಗುತ್ತಿರುವ ವಿಶೇಷ ಶಾಲೆಗಳು :** 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

- **ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ** : ಈ ಯೋಜನೆಯಡಿ ಬುದ್ದಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 141 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ದಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.
- **ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ** : ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.
- **ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು** : ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 16 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ. 10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.
- **ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ** : ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯಾಗಿದ್ದು, ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
- **ವಿಶೇಷ ಶಿಕ್ಷಣ ತರಬೇತಿ ಕೇಂದ್ರ** : ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಂದಿಗೆ ತರಬೇತಿಯನ್ನು ನೀಡಲು ಅವಕಾಶವಿರುತ್ತದೆ.
- **ಬ್ರೈಲ್ ಮುದ್ರಣಾಲಯ** : ಮೈಸೂರಿನಲ್ಲಿರುವ ಸರ್ಕಾರಿ ಬ್ರೈಲ್ ಮುದ್ರಣಾಲಯದಲ್ಲಿ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಅಂಧ ಮಕ್ಕಳ ವಿಶೇಷ ಶಾಲೆಗಳಿಗೆ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.
- **ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆ**ಯಡಿ 02 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

- **ಆನ್-ಲೈನ್ ಮೂಲಕ ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ :** 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಇಲಾಖೆಯಿಂದ ಮಾನ್ಯತೆ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಗುರುತಿನ ಚೀಟಿ ವಿತರಿಸಲಾಗುತ್ತಿತ್ತು. ಈ ವ್ಯವಸ್ಥೆಯನ್ನು ಸುಲಭಗೊಳಿಸಲು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್)ಇ-ಆಡಳಿತ ಇಲಾಖೆಯ ಸೇವಾ ಸಿಂಧು ಯೋಜನೆಯಡಿ ಸೂಕ್ತ ತಂತ್ರಾಂಶವನ್ನು ಸಿದ್ಧಪಡಿಸಿ, ಆನ್-ಲೈನ್ ಮೂಲಕ ಗುರುತಿನ ಚೀಟಿ ನೀಡಲು ದಿನಾಂಕ:01.10.2018ರಂದು ನಡೆದ ಹಿರಿಯ ನಾಗರಿಕರ ದಿನಾಚರಣೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ವಿದ್ಯುಕ್ತವಾಗಿ ಉದ್ಘಾಟಿಸಿರುತ್ತಾರೆ. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ಸಮಗ್ರ ನಾಗರೀಕ ಸೇವೆಗಳ ಕೇಂದ್ರಗಳಾದ ಬೆಂಗಳೂರು-1, ಸಿಎಸ್‌ಸಿ ಸೇವಾ ಕೇಂದ್ರ, ಕರ್ನಾಟಕ-1, ಅಟಲ್ ಜೀ ಜನ ಸ್ನೇಹ ಕೇಂದ್ರ ಮತ್ತು ಬಾಪೂಜಿ ಕೇಂದ್ರಗಳ ಮೂಲಕ ಗುರುತಿನ ಚೀಟಿ ಪಡೆಯಬಹುದಾಗಿದೆ. ಇದುವರೆಗೆ 814 ಆನ್-ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಹಾಗೂ ಈ ವರೆಗೂ 600 ಕಾರ್ಡ್‌ಗಳನ್ನು ವಿತರಿಸಲು ಕ್ರಮವಹಿಸಲಾಗಿದೆ.

- **ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ** (UNIQUE DISABILITY ID) : ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

## <u>ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ</u>

- ಉದ್ಯೋಗಿನಿ
- ಲಿಂಗತ್ವಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ
- ಕಿರುಸಾಲ ಯೋಜನೆ
- ಚೇತನಯೋಜನೆ
- ಮಹಿಳಾ ತರಬೇತಿಯೋಜನೆ
- ಮಾರುಕಟ್ಟೆ ನೆರವುಯೋಜನೆ
- ಸಮೃದ್ಧಿ ಯೋಜನೆ
- ಧನಶ್ರೀ ಯೋಜನೆ
- ಬಡ್ಡಿ ಸಹಾಯಧನಯೋಜನೆ
- ದೇವದಾಸಿ ಪುನರ್ವಸತಿ ಯೋಜನೆ
- ಮಾಜಿ ದೇವದಾಸಿಯರ ಮಾಸಾಶನಯೋಜನೆ
- ಮಾಜಿ ದೇವದಾಸಿ ವಸತಿಯೋಜನೆ
- ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯದನ (059) ಇತರೆ ಖರ್ಚುಗಳು

## <u>ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ</u>

- ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
- ಮಕ್ಕಳಿಗಾಗಿ ವಿಶೇಷ ಪಾಲನಾ ಕೇಂದ
- ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಖಚಿತವಾದ ಆದಾಯ ಯೋಜನೆ

************

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ಎಲ್ ಧರ್ಮೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:559ಕ್ಕೆ ಅನುಬಂಧ-2.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಮೀಸಲಿಟ್ಟಿರುವ ಅನುದಾನದ ವಿವರ

| ಕ್ರ.ಸಂ. | ಕಾರ್ಯಕ್ರಮದ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟಿರುವ ಅನುದಾನ (ರೂ. ಲಕ್ಷಗಳಲ್ಲಿ) | |
|---|---|---|---|
| | | ಕೇಂದ್ರದ ಪಾಲು | ರಾಜ್ಯದ ಪಾಲು |
| | **ಕೇಂದ್ರ ಪುರಸ್ಕೃತ ಯೋಜನೆಗಳು** | | |
| 1. | ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ತರಬೇತಿ (ಕೇಂದ್ರದ ಪಾಲು 60% : ರಾಜ್ಯದ ಪಾಲು 40%) | 600.00 | 400.00 |
| 2. | ಉದ್ಯೋಗಿತ ಮಾತೆಯರ ಮಕ್ಕಳಿಗಾಗಿ ಶಿಶುವಿಹಾರಗಳು (ಕೇಂದ್ರ ಪಾಲು 60% : ರಾಜ್ಯದ ಪಾಲು 40%) | 548.40 | 365.60 |
| 3. | ಅಂಗನವಾಡಿಗಳ ನಿರ್ವಹಣೆ (ಕೇಂದ್ರದ ಪಾಲು 60% : ರಾಜ್ಯದ ಪಾಲು 40%) | 1.20 | 0.80 |
| 4. | ಬೇಟಿ ಬಜಾವೋ ಬೇಟಿ ಪಡಾವೋ (ಕೇಂದ್ರದ ಪಾಲು 100%) | 300.00 | 0.00 |
| 5. | ಒನ್ ಸ್ಟಾಪ್ ಕೇಂದ್ರ (ಕೇಂದ್ರದ ಪಾಲು 100%) | 1.00 | 0.00 |
| 6. | ಪ್ರಾಯ ಪೂರ್ವ ಬಾಲಕಿಯರ ಯೋಜನೆ (ಕೇಂದ್ರ ಪಾಲು 60% : ರಾಜ್ಯದ ಪಾಲು 40%) | 253.80 | 169.20 |
| 7. | ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ (ಕೇಂದ್ರ ಪಾಲು 60% : ರಾಜ್ಯದ ಪಾಲು 40%) | 6000.00 | 4000.00 |
| 8. | ಸ್ವಾಧಾರ ಗೃಹ (ಕೇಂದ್ರ ಪಾಲು 60% : ರಾಜ್ಯದ ಪಾಲು 40%) | 180.00 | 120.00 |
| 9. | ಉಜ್ವಲ ಯೋಜನೆ (ಕೇಂದ್ರ ಪಾಲು 60% : ರಾಜ್ಯದ ಪಾಲು 40%) | 226.80 | 151.20 |
| 10. | ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಜಿಲ್ಲಾ ಘಟಕ) ಕೇಂ.ಪು.ಯೋ (ಕೇಂದ್ರದ ಪಾಲು 60% : ರಾಜ್ಯದ ಪಾಲು 40%) (ಆಡಳಿತ ವೆಚ್ಚ) | 56938.00 | 37959.00 |
| 11. | ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಕೇಂದ್ರಪುರಸ್ಕೃತ ಯೋಜನೆ- (ಕೇಂದ್ರದ ಪಾಲು 60% : ರಾಜ್ಯದ ಪಾಲು 40%)<br>(204 ಶಿಶು ಅಭಿವೃದ್ಧಿ ಯೋಜನೆಯ ಆಡಳಿತ ವೆಚ್ಚ) | 10752.00 | 10752.00 |
| 12. | ಶಾಲಾ ಪೂರ್ವ ಮಕ್ಕಳ ಊಟದ ಯೋಜನೆ (ಕೇಂದ್ರ ಪಾಲು 50% : ರಾಜ್ಯದ ಪಾಲು 50%) (ಮಾತೃಪೂರ್ಣ, ಸೃಷ್ಟಿ ಮತ್ತು ಕ್ಷೀರಭಾಗ್ಯ ಯೋಜನೆ) | 107521.00 | 107521.00 |
| | **ರಾಜ್ಯ ವಲಯ ಕಾರ್ಯಕ್ರಮಗಳು** | | |
| 13. | ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟದ ನಿವಾರಣೆಯ ಯೋಜನೆ | 0.00 | 50.00 |
| 14. | ಭಾಗ್ಯಲಕ್ಷ್ಮಿ | 0.00 | 30943.00 |
| 15. | ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ | 0.00 | 44.00 |
| 16. | ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆ | 0.00 | 200.00 |
| 17. | ಸ್ತ್ರೀಶಕ್ತಿ ಯೋಜನೆ | 0.00 | 1470.00 |
| 18. | ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರಿಗೆ ರಕ್ಷಣೆ ನೀಡುವ ಬಗ್ಗೆ | 0.00 | 733.52 |
| 19. | ಗೆಳತಿ–ವಿಶೇಷ ಚಿಕಿತ್ಸಾ ಘಟಕ | 0.00 | 275.48 |

| | | | |
|---|---|---|---|
| 20 | ಸ್ಥೈರ್ಯ ನಿಧಿ | 0.00 | 20.00 |
| 21 | ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ನಿರ್ಮಾಣ | 0.00 | 1.00 |
| 22 | ಬಾಲಕಿಯರಿಗಾಗಿ ವಸತಿ ನಿಲಯ | 0.00 | 475.00 |
| 23 | ಸಾಂತ್ವನ –ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ನೆರವು | 0.00 | 729.00 |
| 24 | ನಬಾರ್ಡ್ ನೆರವಿನಿಂದ ಅಂಗನವಾಡಿ ಕಟ್ಟಡ ನಿರ್ಮಾಣ | 0.00 | 4338.00 |
| 25 | ಅಂಗನವಾಡಿ ಕಟ್ಟಡ ನಿರ್ಮಾಣ (ವಿಶೇಷ ಅಭಿವೃದ್ಧಿ ಯೋಜನೆ) | 0.00 | 3600.00 |
| 26 | ಅಂಗನವಾಡಿ ಕಟ್ಟಡಗಳ ನಿರ್ಮಾಣ (ಐ.ಸಿ.ಡಿ.ಎಸ್ – ನರೇಗ) | 0.00 | 3900.00 |
| 27 | ಅಂಗನವಾಡಿ ಕಟ್ಟಡಗಳ ಉನ್ನತೀಕರಣ | 0.00 | 3.00 |
| 28 | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕ್ಷೇಮಾಭಿವೃದ್ಧಿ ನಿಧಿ | 0.00 | 60.00 |
| 29 | ಅಂಗನವಾಡಿ ಕಾರ್ಯಕರ್ತೆಯರ ಹೊಸ ಪಿಂಚಣಿ ಪದ್ಧತಿ | 0.00 | 1512.00 |
| 30 | ತಾಲ್ಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಉತ್ಪನ್ನಗಳಿಗೆ ಮಾರುಕಟ್ಟೆ ಮಳಿಗೆಗಳ ನಿರ್ಮಾಣ | 0.00 | 1.00 |
| 31 | ಸ್ವಸಹಾಯ ಸಂಘಗಳು ಮತ್ತು ಗೊಂಚಲು ತರಬೇತಿ ಕೇಂದ್ರಗಳ ನಿರ್ಮಾಣ (ವಿಶೇಷ ಅಭಿವೃದ್ಧಿ ಯೋಜನೆ) | 0.00 | 20.00 |
| 32 | ನಿರ್ಗತಿಕ ಮಕ್ಕಳ ಕುಟೀರಗಳು | 0.00 | 941.09 |
| 33 | ಅಂಗನವಾಡಿ ಕಟ್ಟಡ ನಿರ್ವಹಣೆ ಮತ್ತು ದುರಸ್ತಿ | 0.00 | 2649.00 |
| 34 | ದುಡಿಯುವ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರ | 0.00 | 98.00 |
| 35 | ಸುಧಾರಣಾ ಸಂಸ್ಥೆಗಳ ಕಟ್ಟಡ ನಿರ್ಮಾಣ | 0.00 | 300.00 |
| 36 | ರಾಜ್ಯ ಮಹಿಳಾ ನಿಲಯಗಳು ಹಾಗೂ ಸ್ವೀಕಾರ ಕೇಂದ್ರಗಳು | 0.00 | 639.00 |
| 37 | ಮಾತೃಶ್ರೀ ಯೋಜನೆ | 0.00 | 35000.00 |
| 38 | ಸುಧಾರಣಾ ಸಂಸ್ಥೆಗಳ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆ | 0.00 | 55.00 |

## ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಅನುದಾನವನ್ನು ನಮ್ಮ ಯೋಜನೆಗಳಿಗೆ ನಿಗದಿಪಡಿಸಿರುವುದಿಲ್ಲ. ನೇರವಾಗಿ ಕೇಂದ್ರ ಸರ್ಕಾರದಿಂದ ಕೆಲವು ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಯೋಜನೆಗಳಿಗೆ ಆನ್-ಲೈನ್‌ನಲ್ಲಿ ಪ್ರಸ್ತಾವನೆಗಳನ್ನು ಪಡೆದು ಕೇಂದ್ರ ಅನುದಾನ ಸಮಿತಿಯ ಮುಂದೆ ಮಂಡಿಸಿ, ಸೂಕ್ತವೆಂದು ಕಂಡು ಬಂದ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಯೋಜನೆಗಳ ನಿಯಮ ಹಾಗೂ ವ್ಯವಸ್ಥೆಗಳಿಗೆ ಅನುಸಾರವಾಗಿ ಆಯವ್ಯಯವನ್ನು ಬಿಡುಗಡೆ ಮಾಡಲಾಗುತ್ತಿದೆ. ಇಂತಿಷ್ಟೇ ಎಂಬ ನಿರ್ದಿಷ್ಟ ಆಯವ್ಯಯದ ಗುರಿಯನ್ನು ನಿಗದಿಪಡಿಸಿರುವುದಿಲ್ಲ.

| ಕ್ರ. ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಮೀಸಲಿರಿಸಿದ ಅನುದಾನ |
|---|---|---|
| I | ರಾಜ್ಯ ವಲಯ | |
| 1 | ಸಮಾಜ ಸೇವಾ ಸಂಕೀರ್ಣ | 77.50 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ | 499.50 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ | 35.00 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ | 298.00 |
| 5 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ | 54889.50 |
| 6 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ | 21.50 |
| 7 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು | 28.00 |

| | | |
|---|---|---|
| 8 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು | 175.00 |
| 9 | ಅಂಗವಿಕಲರಿಗೆ ಸಾಧನ ಸಲಕರಣೆಗಳು | 650.00 |
| 10 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ | 950.50 |
| 11 | ವಿಕಲಚೇತನರಿಗೆ ಉದ್ಯೋಗ ಕೋಶ | 50.00 |
| 12 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ | 1425.00 |
| 13 | ಹಿರಿಯ ನಾಗರಿಕರ ನೀತಿ | 250.00 |
| 14 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ | 2618.00 |
| 15 | ಕಟ್ಟಡಗಳು | 66.00 |
| | **ಒಟ್ಟು ರೂ.** | **62033.50** |
| II | **ಜಿಲ್ಲಾ ವಲಯ** | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು | 1675.70 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು | 240.00 |
| | **ಒಟ್ಟು ರೂ.** | **1915.70** |
| | **ಒಟ್ಟು ರೂ. ( I+ II)** | **63949.20** |

| **ಕೇಂದ್ರ ಸರ್ಕಾರದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು** | |
|---|---|
| **ಕ್ರಸಂ** | **ಯೋಜನೆಯ ಹೆಸರು** |
| 01 | ನ್ಯಾಷನಲ್ ಇ-ಸ್ಕ್ಯಾಲರ್ ಶಿಫ್. |
| 02 | ದೀನ ದಯಾಳ್ ರಿಹ್ಯಾಬಿಲಿಟೇಷನ್ (ಡಿಡಿಆರ್‌ಎಸ್) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಯೋಜನೆ. |
| 03 | ಅಡಿಪ್ (ಅಸಿಸ್ಟಿವ್ ಡಿವೈಸಸ್ ಫಾರ್ ಪರ್ಸನ್ಸ್ ವಿತ್ ಡಿಸೆಬಿಲಿಟೀಸ್) ಯೋಜನೆ. |

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

| **ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳಡಿ ಮೀಸಲಿರಿಸಿದ ಅನುದಾನದ ವಿವರ (ರೂ.ಲಕ್ಷಗಳಲ್ಲಿ)** | | |
|---|---|---|
| **ಕ್ರಸಂ.** | **ಯೋಜನೆಗಳು** | **ಆರ್ಥಿಕ ಗುರಿ** |
| 1 | ದೇವದಾಸಿ ಪುನರ್ವಸತಿ ಯೋಜನೆ | **700.00** |
| 2 | ಮಾಜಿ ದೇವದಾಸಿಯರಿಗೆ ಮಾಸಾಶನ | **4772.00** |
| 3 | ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ | **1585.00** |

| | | |
|---|---|---|
| 4 | ಉದ್ಯೋಗಿನಿ | **2530.00** |
| 5 | ಕಿರು ಸಾಲದ ಯೋಜನೆ (ಗುಂಪುಗಳು) | **500.00** |
| 6 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | **410.00** |
| 7 | ಮಹಿಳಾ ತರಬೇತಿ ಯೋಜನೆ | **500.00** |
| 8 | ಚೇತನ ಯೋಜನೆ | **205.00** |
| 9 | ಬಡ್ಡಿ ಸಹಾಯಧನ ಯೋಜನೆ (K.S.F.C) | **3294.00** |
| 10 | ಮಾರುಕಟ್ಟೆ ನೆರವು ಯೋಜನೆ ಹಾಗೂ ರಾಜ್ಯ ಸಂಪನ್ಮೂಲ ಯೋಜನೆ | **200.00** |
| 11 | ಸಮೃದ್ಧಿ ಯೋಜನೆ | **500.00** |
| 12 | ಧನಶ್ರೀ ಯೋಜನೆ | **500.00** |
| 13 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ-2013ರಡಿ ಒಳಕೆಯಾಗದ ಇರುವ ಮೊತ್ತ :(422)ಪ.ಜಾ.ಉಪಯೋಜನೆ : 1191.00 (423)ಗಿರಿಜನ ಉಪಯೋಜನೆ: 545.00 | **1736.00** |
| 14 | ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯದನ(059)ಇತರೆ ಖರ್ಚುಗಳು | **100.00** |
| | **ಒಟ್ಟು ಮೊತ್ತ** | **17532** |

**<u>ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ</u>**

| **ಯೋಜನೆ ಹೆಸರು** | **ಹಂಚಿಕೆ (ರೂ.ಲಕ್ಷಗಳಲ್ಲಿ)** | **ಕೇಂದ್ರದ ಅನುದಾನ (ರೂ.ಲಕ್ಷಗಳಲ್ಲಿ)** | **ರಾಜ್ಯದ ಅನುದಾನ (ರೂ.ಲಕ್ಷಗಳಲ್ಲಿ)** |
|---|---|---|---|
| ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ | 6811.00 | 4198.06 (ಕಟ್ಟಡ ನಿರ್ಮಾಣ ವೆಚ್ಚ ಒಳಗೊಂಡಂತೆ) | 2612.94 |
| ಮಕ್ಕಳಿಗಾಗಿ ವಿಶೇಷ ಪಾಲನಾ ಕೇಂದ್ರ | 1500.00 | 0.00 | 1500.00 |
| ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಖಚಿತವಾದ ಆದಾಯ ಯೋಜನೆ | 1.00 | 0.00 | 1.00 |

************

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ಎಲ್ ಧರ್ಮೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:559ಕ್ಕೆ ಅನುಬಂಧ-3.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

| ಕ್ರ.ಸಂ | ಯೋಜನೆ ಹೆಸರು | ವರ್ಷವಾರು ಅನುದಾನ ಬಿಡುಗಡೆ | | |
|---|---|---|---|---|
| | | 2015-16 | 2016-17 | 2017-18 |
| 1 | ಸಾಂತ್ವನ | 26.36 | 34.46 | 26.79 |
| 2 | "ಗೆಳತಿ"-ಜಿಲ್ಲಾ ಹಾಗೂ ತಾಲ್ಲೂಕು ವಿಶೇಷ ಚಿಕಿತ್ಸಾ ಘಟಕ | 7.00 | 8.38 | 7.87 |
| 3 | ಕೌಟುಂಬಿಕ ಹಿಂಸೆಯಿಂದ ಮಹಿಳಾ ಸಂರಕ್ಷಣಾ ಕಾಯ್ದೆ | 9.82 | 9.12 | 11.60 |
| 4 | ಉದ್ಯೋಗಸ್ಥ ಮಹಿಳೆಯರ ವಸತಿಗೃಹ | 0 | 0 | 0 |
| 5 | ಬಾಲಕಿಯರ ವಸತಿ ನಿಲಯ | 8.22 | 7.50 | 8.89 |
| 6 | ಸ್ವಾಧಾರಗೃಹ | 0 | 0 | 0 |
| 7 | ಒನ್ ಸ್ಟಾಪ್ ಸೆಂಟರ್ (ಸಖಿ) | 0 | 0 | 0 |
| 8 | ಸ್ತ್ರೀಶಕ್ತಿ ಯೋಜನೆ | 135.36 | 132.60 | 135.50 |
| 9 | ಭಾಗ್ಯಲಕ್ಷ್ಮಿ (ಅನುದಾನವು ನೇರವಾಗಿ ಸರ್ಕಾರದಿಂದ ಎಲ್.ಐ.ಸಿ. ನಿಗಮಕ್ಕೆ ಬಿಡುಗಡೆಯಾಗುತ್ತದೆ) | 597.69 | 427.54 | 0 |
| 10 | ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ | 2.36 | 4.20 | 4.28 |
| 11 | ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ (ಮಾತೃಪೂರ್ಣ ಹಾಗೂ ಕ್ಷೀರಭಾಗ್ಯ ಯೋಜನೆ ಸೃಷ್ಟಿ ಯೋಜನೆ ಒಳಗೊಂಡಂತೆ) | 1247.88 | 1283.00 | 3448.97 |
| 12 | ಮಾತೃವಂದನಾ | 0 | 0 | 13.10 |
| 13 | ನಿರ್ಗತಿಕ ಮಕ್ಕಳ ಕುಟೀರ | 1.85 | 3.00 | 2.70 |
| 14 | ಅಂಗನವಾಡಿ ಕಟ್ಟಡ ನಿರ್ಮಾಣ | 265.93 | 39.17 | 199.80 |
| 15 | ಅಂಗನವಾಡಿ ಕಟ್ಟಡ ನಿರ್ವಹಣೆ | 68.00 | 68.00 | 68.00 |
| 16 | ಬಾಲ್ಯವಿವಾಹ ನಿಷೇಧ ಕಾರ್ಯಕ್ರಮ | 1.75 | 2.85 | - |
| 17 | ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಯೋಜನೆ | 0.36 | 0.36 | - |
| 18 | ಸಬಲ | 2.88 | - | - |
| 19 | ಅಂ.ಕಾ ಮತ್ತು ಅಂಸ ಮರಣ ಪರಿಹಾರ ಯೋಜನೆ | 4.80 | 1.50 | 2.00 |
| 20 | ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ | 1.40 | 1.40 | 1.43 |

### ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ

| ಕ್ರ ಸಂ | ಯೋಜನೆಗಳ ವಿವರ | 2015-16 (ಲಕ್ಷಗಳಲ್ಲಿ) | 2016-17 (ಲಕ್ಷಗಳಲ್ಲಿ) | 2017-18 (ಲಕ್ಷಗಳಲ್ಲಿ) |
|---|---|---|---|---|
| 01 | ಅಂಗವಿಕಲರಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ ಯೋಜನೆ | 14.35 | 10.63 | 10.09 |
| 02 | 1982ರ ಅನುದಾನ ಸಂಹಿತೆಯಡಿ ಅನುದಾನ | 72.00 | 86.00 | 89.00 |
| 03 | ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ | 31.50 | 103.68 | 111.02 |

| | | | | |
|---|---|---|---|---|
| 04 | ನಿರಾಮಯ | 0.31 | 0.15 | 0.32 |
| 05 | ವಿಕಲಚೇತನ ಉದ್ಯೋಗಸ್ಥ ಮಹಿಳೆಯರು ಹಾಗೂ ತರಬೇತಿದಾರರ ವಸತಿ ನಿಲಯ | 11.80 | 0.00 | 0.00 |
| 06 | ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿನ ದೃಷ್ಟಿಹೀನ ಮಹಿಳೆಯ ಎರಡು ಹೆರಿಗೆಯವರೆಗೆ ಶಿಶುಪಾಲನಾ ಭತ್ಯೆ | 1.12 | 1.96 | 1.00 |
| 07 | ಶುಲ್ಕ ಮರುಪಾವತಿ | 3.03 | 3.63 | 3.00 |

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

| ಕ್ರ ಸಂ | ಯೋಜನೆ ಹೆಸರು | ವರ್ಷವಾರು ಅನುದಾನ ಬಿಡುಗಡೆ(ರೂ.ಲಕ್ಷಗಳಲ್ಲಿ) | | |
|---|---|---|---|---|
| | | 2015-16 | 2016-17 | 2017-18 |
| 1 | ಉದ್ಯೋಗಿನಿ ಯೋಜನೆ | 20.08 | 32.84 | 27.16 |
| 2 | ಕಿರುಸಾಲ ಯೋಜನೆ | 10.00 | 22.00 | 15.00 |
| 3 | ಸಮೃದ್ಧಿ ಯೋಜನೆ | 0 | 14.20 | 10.00 |
| 4 | ಚೇತನ ಯೋಜನೆ | 3.69 | 6.15 | 2.52 |
| 5 | ಧನಶ್ರೀ ಯೋಜನೆ | 0 | 15.15 | 12.63 |
| 6 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | - | 3.90 | 5.05 |
| 7 | ಮಹಿಳಾ ತರಬೇತಿ ಯೋಜನೆ | 4.4 | 10.24 | 0.33 |
| 8 | ಸವಿರುಚಿ | - | - | 10 |
| 9 | ಮಾರುಕಟ್ಟೆ ಯೋಜನೆ | 2.15 | 1.95 | 0 |
| 10 | ಸ್ವ ಉದ್ಯೋಗ ಮಾರ್ಗದರ್ಶನ ಕೇಂದ್ರ | 1.52 | 2.1 | 2.94 |

## ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ

| ಕ್ರ. ಸಂ | ಯೋಜನೆ ಹೆಸರು | 2015-16 (ರೂ.ಲಕ್ಷಗಳಲ್ಲಿ) | 2016-17 (ರೂ.ಲಕ್ಷಗಳಲ್ಲಿ) | 2017-18 (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ | 47.29 | 53.45 | 48.66 |
| 2 | ಮಕ್ಕಳಿಗಾಗಿ ವಿಶೇಷ ಪಾಲನಾ ಕೇಂದ್ರ | 20.42 | 18.61 | 31.80 |
| 3 | ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಖಚಿತ ಆದಾಯ ಯೋಜನೆ | 0.00 | 0.00 | 0.00* |

*ಯೋಜನೆಯನ್ನು 2017-18ನೇ ಸಾಲಿನಲ್ಲಿ ಜಾರಿಗೆತರಲು ಮಾರ್ಗಸೂಚಿಯನ್ನು ಹೊರಡಿಸಿದೆ.

************